ಶ್ರೀ ಹೆಚ್. ವಿಕಾಂತಯ್ಯ: ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಪ್ರಸ್ತಾವದ ಮೇಲೆ ಈ ಕೆಳಗಿನ ತಿದ್ದುಪಡಿಯನ್ನು ಸೂಚಿಸಲು ಬಯಸುತ್ತೇನೆ. ಪ್ರಸ್ತಾವದ ಕೊನೆಯಲ್ಲಿ ಈ ಕೆಳಕಂಡಂತೆ ಸೇರಿಸುವುದು."ಆದರೆ ಆಡಳಿತ ಪಕ್ಷದಲ್ಲಿ ನಡೆದ ಯಾದವೀ ಕಲಹ ರಾಜ್ಯದ ಆಡಳಿತದ ಮೇಲೆ ಬೀರಿದ ದುಷ್ಪರಿಣಾಮದ ಬಗ್ಗೆ ಪ್ರಸ್ತಾಪಿಸದೇ ಇರುವುದಕ್ಕೆ ಈ ಸದನ ವಿಷಾದಿಸುತ್ತದೆ".

ಉಪಾಧ್ಯಕ್ಷರು: ಪ್ರಸ್ತಾವವನ್ನು ಮಂಡಿಸಲಾಗಿದೆ.

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್: ಮಾನ್ಯ ಅಧ್ಯಕ್ಷರೆ, ವಂದನಾರ್ಪಣ ಭಾಷಣದ ಕೊನೆಗೆ ಈ ತಿದ್ದುಪಡಿಯನ್ನು ಸೂಚಿಸುತ್ತೇವೆ. "ಆದರೆ ಅತ್ಯಂತ ದುಃಖದಿಂದ ಹೇಳುವುದೇನೆಂದರೆ, ಭಾರತ ಸರಕಾರದ ಹೊಸ ಆರ್ಥಿಕ ಉದಾರ ನೀತಿ ಮತ್ತು ಪ್ರಮುಖ ಆರ್ಥಿಕ ಹೊಸ ನೀತಿಗಳು ಕರ್ನಾಟಕ ಸರಕಾರ ಯೋಜಿಸಿದ ಅಲ್ಪಸಂಖ್ಯಾತರ ಪರಿಶಿಷ್ಟ ಜಾತಿ ಪಂಗಡಗಳ ಹೆಣ್ಣುಮಕ್ಕಳ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ರಾಜ್ಯ ಸರಕಾರದ ಅಧಿಕಾರದ ಮೇಲೆ ನಿಷೇಧಾತ್ಮಕ ಪರಿಣಾಮಗಳನ್ನು ಬೀರುತ್ತವೆ ಅಲ್ಲದೆ ಬೆಳೆಯುತ್ತಿರುವ ನಿರುದ್ಯೋಗವನ್ನು ತಡೆಯಲೂ ಸಹ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತವೆ"

ಉಪಾಧ್ಯಕ್ಷರು: ಪ್ರಸ್ತಾವನೆಯನ್ನು ಮಂಡಿಸಲಾಗಿದೆ.

ಪ್ರಕಟಣೆ

ಉಪಾಧ್ಯಕ್ಷರು: ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 114 ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕೃತವಾದ ಈ ಕೆಳಕಂಡ ವಿಧೇಯಕಗಳನ್ನು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 9-2-94 ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ:-

1. ಕರ್ನಾಟಕ ಸಿವಿಲ್ ನ್ಯಾಯಾಲಯಗಳ ತಿದ್ದುಪಡಿ ವಿಧೇಯಕ 1993
2. ಕರ್ನಾಟಕ ಅಬಕಾರಿ ತಿದ್ದುಪಡಿ ವಿಧೇಯಕ 1993
3. ಕರ್ನಾಟಕ ಅಬಕಾರಿ 2ನೇ ತಿದ್ದುಪಡಿ ವಿಧೇಯಕ 1993

ಒಬ್ಬ ಮಾನ್ಯ ಸದಸ್ಯರು: ಮಾನ್ಯ ವಾಟಾಳ್‌ರವರು ವೆಲ್ಲಲ್ಲಿ ಕುಳಿತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಭರವಸೆ ಕೊಟ್ಟು, ಅವರನ್ನು ಸ್ಥಳಕ್ಕೆ ಕಳಿಸಿಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಉಪಾಧ್ಯಕ್ಷರೇ, ಹಿರಿಯ ಸದಸ್ಯರಾದ ಹಾಗೂ ಕನ್ನಡ ಚಳುವಳಿಗೆ ತಳಹದಿ ಹಾಕಿದಂತಹ ವಾಟಾಳ್ ನಾಗರಾಜ್ ಅವರು ಅಲ್ಲಿ ಕುಳಿತುಕೊಳ್ಳುವುದು ಮತ್ತು ನಾವಿಲ್ಲಿ ಕುಳಿತುಕೊಂಡು ವ್ಯವಹಾರ ನಡೆಸುವುದು ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಆದ್ದರಿಂದ ಅವರು ತಮ್ಮ ಆಸನಕ್ಕೆ ಹೋದರೆ ನಾನು ಒಂದೆರಡು ವಿಚಾರಗಳನ್ನು ಈಗ್ಗೆ ಹೇಳಲಿಕ್ಕೆ ಸಾಧ್ಯವಾಗುತ್ತದೆ. ಅಲ್ಲಿ ಹೋಗಿ ಕುಳಿತುಕೊಳ್ಳಿ. ಮನಸ್ಸಿಗೆ ತೃಪ್ತಿಯಾಗದಿದ್ದರೆ ಆಮೇಲೆ ಬೇಕಾದರೆ ಅಲ್ಲಿಗೆ ಬನ್ನಿ ನಿಮ್ಮನ್ನು ಅಲ್ಲಿ ಕೂರಿಸಿ ನಾವು ಇಲ್ಲಿ ನಿಂತು ಹೇಳಲು ನಮಗೆ ಬಹಳ ಮುಜುಗರವಾಗುತ್ತದೆ. ಆದ್ದರಿಂದ ಅಲ್ಲಿ ಹೋಗಿ ಕುಳಿತುಕೊಳ್ಳಿ, ತಮಗೆ ಸಮಾಧಾನವಾಗದಿದ್ದರೆ ಪುನಃ ಬನ್ನಿ.

(ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಳಕ್ಕೆ ಹೋದರು.)

ಮುಖ್ಯಮಂತ್ರಿಗಳಿಂದ ಹೇಳಿಕೆ